ರಾಷ್ಟ್ರೀಯ ಜಲ ನೀತಿ ರೂಪಿಸುವುದು

746 - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಷ್ಟ್ರೀಯ ಜಲ ನೀತಿ ರಾಷ್ಟ್ರದಲ್ಲಿ ಅವಶ್ಯಕವಾಗಿ ರೂಪಿತವಾಗಬೇಕೆಂಬುದನ್ನು ಸರ್ಕಾರವು ಮನಗಂಡಿದೆಯೇ?*

ಆ) *ರಾಷ್ಟ್ರೀಯ ಜಲ ನೀತಿ ರೂಪಿತವಾಗುವ ನಿಟ್ಟಿನಲ್ಲಿ ರಾಜ್ಯವು ತನ್ನ ಪ್ರಯತ್ನಗಳನ್ನೇನಾದರೂ ಮಾಡಿದೆಯೇ?*

ಇ) *ಹಾಗಿದ್ದಲ್ಲಿ ಈವರೆವಿಗಿನ ಪ್ರಗತಿಯ ವಿವರಗಳೇನು?*

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಹೌದು.

ಆ) ಮಾಡಿದೆ.

ಇ) ದಿ. 20-10-98 ರಂದು ನಡೆದ ರಾಷ್ಟ್ರೀಯ ಜಲ ಮಂಡಳಿಯ ಹತ್ತನೇ ಸಭೆಯಲ್ಲಿ ರೂಪಿಸಿರುವ ರಾಷ್ಟ್ರೀಯ ಜಲ ನೀತಿ (1998)ನ ಕರಡನ್ನು ಮತ್ತು ರಾಷ್ಟ್ರೀಯ ಜಲ ನೀತಿಯ ಮಾರ್ಗಸೂಚಿಗಳನ್ನು ರಾಷ್ಟ್ರೀಯ ಜಲ ಸಂಪನ್ಮೂಲ ಪರಿಷತ್ತಿನ 4ನೇ ಸಭೆಯಲ್ಲಿ ಚರ್ಚಿಸಲು ಮಂಡಿಸಲಾಗುವುದು.

ವರುಣ ನಾಲೆಗೆ ಆಳವಡಿಸಿರುವ ತೂಬಿನ ಆಳತೆ

747 - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವರುಣಾ ನಾಲಾ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಬಿಡಲು ಆಳವಡಿಸಲಾಗಿರುವ ತೂಬಿನ ಆಳತೆ ಬಗೆಗೆ ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ನಾಲಾ ಬಯಲಿನ ರೈತರು ಪ್ರತಿರೋಧ ವ್ಯಕ್ತಪಡಿಸಿದ್ದು, ಆ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವಲ್ಲವೇ?*

ಆ) *ಹಾಗಿದ್ದಲ್ಲಿ ಸರ್ಕಾರ ಈ ಮನವಿಯ ಬಗೆಗೆ ಯಾವ ಕ್ರಮವನ್ನು ಕೈಗೊಂಡಿದೆ?*

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ನಿಜ.

ಆ) ಇದರ ಬಗ್ಗೆ ಪರಿಶೀಲಿಸಿ ಸ್ಪಷ್ಟೀಕರಣ ಆದೇಶಗಳನ್ನು ಹೊರಡಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.